**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**<u>ಸಿ ಸಿ. 229/2024</u>**

**ಸಿಡಬ್ಲೂ. 7 ಪಿಡಬ್ಲೂಃ 8**

| | |
|---|---|
| **ಸಾಕ್ಷಿಯ ಹೆಸರು** | **ಶ್ರೀಧರ್** |
| **ತಂದೆ ಹೆಸರು** | **ಲೇಟ್ ವೆಂಕಟೇಶ್** |
| **ವಯಸ್ಸು** | **44 ವರ್ಷ** |
| **ಉದ್ಯೋಗ** | **ಹೆಚ್ ಸಿ ಶ್ರೀರಂಗಪಟ್ಟಣ ನಗರ ಪೊಲೀಸ್ ಠಾಣೆ** |
| **ವಾಸ** | **ಕೆ ಆರ್ ಎಸ್** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 05.08.2026**

**<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ</u>**

1. ನಾನು 2023 ರಿಂದ 2025 ವರೆಗೆ ಕೆ ಆರ್ ಎಸ್ ಠಾಣೆಯಲ್ಲಿ ಹೆಚ್ ಸಿ ಕೆಲಸ ಮಾಡಿರುತ್ತೇನೆ. ದಿಃ 17.06.2024 ರಂದು ಚಾಸಾ.7 ರವರು ನನ್ನನ್ನು ಕೃತ್ಯ ನಡೆದ ಸ್ಥಳದ ಪಂಚನಾಮೆ ಜರುಗಿಸಲು ಅವರ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದು, ದೂರುದಾರರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಚಾಸಾ.8 ರವರು ಜರುಗಿಸಿದರು. ನಾನು ಕೃತ್ಯ ಸ್ಥಳದ ಪೋಟೋಗಳನ್ನು ತೆಗೆದೆನು. ಠಾಣೆ ಯ ಗಣಕ ಯಂತ್ರಕ್ಕೆ ಆಪ್ ಲೋಡ್ ಮಾಡಿಕೊಂಡು ಪೋಟೋವನ್ನು ಪ್ರಿಂಟ್ ತೆಗೆದುಕೊಟ್ಟೆನು. ನಿಪಿ.3 ರಲ್ಲಿರುವ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆ ಬಗ್ಗೆ 65 ಬಿ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ಈಗ

*ನೋಡುತ್ತಿದ್ದು ನಿಪಿ.17 ಎಂದು, ಸಾಕ್ಷಿಯ ಸಹಿಯನ್ನು ನಿಪಿ.17 ಎ ಎಂದು ಗುರುತಿಸಲಾಯಿತು.*

***ಪಾಟೀ ಸವಾಲುಃ 1 ರಿಂದ 8 ನೇ ಆರೋಪಿಗಳ ಪರ ವಕೀಲರಿಂದಃ***

2. *ಆ ದಿನ 11.45 ಗಂಟೆಗೆ ಸ್ಥಳಕ್ಕೆ ಹೋದೆವು. 12 ಗಂಟೆಗೆ ಪೊಟೋ ತೆಗೆದೆನು. ಫೋಟೊೀ ತೆಗೆಯುವಾಗ ದೂರುದಾರರು, ಪಂಚರಾದ ಬಸವರಾಜು ಹಾಗೂ ವಿ ಇದ್ದರು. ಪಂಚರುಗಳು ಅಂಕನಹಳ್ಳಿಯಲ್ಲಿ ಇದ್ದರು. ನೋಟೀಸನ್ನು ಅಂಕನಹಳ್ಳಿಗೆ ಹೋಗಿ ಪಂಚರಿಗೆ ಚಾಸಾ.8 ರವರು ಕೊಟ್ಟರು. ನೋಟೀಸು ಕೊಟ್ಟ ಖಚಿತ ಸಮಯವನ್ನು ಈಗ ಹೇಳಲು ಗೊತ್ತಿಲ್ಲ. ಪಂಚರು ನಾವು ಹೋಗುವಷ್ಟರಲ್ಲಿ ಸ್ಥಳಕ್ಕೆ ಬಂದರು. ಕೃತ್ಯ ನಡೆದಿದೆ ಎಂದು ತೋರಿಸಿದ ಸ್ಥಳದಲ್ಲಿ ನಾನು ಫೋಟೋ ತೆಗೆದೆನು. ನಾನು ಉತ್ತರ ದಿಕ್ಕಿಗೆ ವಿರುದ್ಧವಾಗಿ ಇಟ್ಟುಕೊಂಡು ಫೋಟೋ ತೆಗೆದಿರುತ್ತೇನೆ. ನಿಪಿ.3 ಪಶ್ಚಿಮ ದಿಕ್ಕಿಗೆ ನಿಂತು ತೆಗೆದಿದೆ. ಉತ್ತರಕ್ಕೆ ವಿರುದ್ಧವಾಗಿ ಪಶ್ಚಿಮ ದಿಕ್ಕಿಗೆ ತೆಗೆದಿರುತ್ತೀರಾ ಎಂದರೆ ಸರಿ. ನಿಪಿ.3 ಉತ್ತರ ದಿಕ್ಕಿಗೆ ನಿಂತು ದಕ್ಷಿಣೆ ದಿಕ್ಕಿನ ಕಡೆಗೆ ತೆಗೆದಿದೆ ಎಂದರೆ ಸರಿಯಲ್ಲ. ನಿಪಿ.3 ರ ನೆರಳು ಪೂರ್ವ ದಿಕ್ಕಿನ ಕಡೆಗೆ ತೋರಿಸುತ್ತಿದೆ ಎಂದರೆ ಸರಿಯಲ್ಲ. ನೀವು 12 ಗಂಟೆಗೆ ಪೊಟೋ ತೆಗೆದಿದ್ದರೆ ನೆರಳು ಉತ್ತರ ದಿಕ್ಕಿನ ಕಡೆಗೆ ಬರುತ್ತಿತ್ತು ಎಂದರೆ ಸರಿಯಲ್ಲ.*

3. *ನಿಪಿ.3 ರಲ್ಲಿರುವ ವಸ್ತುಗಳನ್ನು ದೂರುದಾರರು ಎಲ್ಲಿಂದ ತಂದು ಕೊಟ್ಟರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಪೊಟೋ ತೆಗೆಯುವ ಪೂರ್ವದಲ್ಲಿ ಚಾಸಾ.1 ರವರು ಆ*

*ವಸ್ತುಗಳನ್ನು ಚಾಸಾ.8 ರವರಿಗೆ ಕೊಟ್ಟರು ಎಂದರೆ ಸರಿ. ಚಾಸಾ.8 ರವರ ಅಣತಿಯಂತೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ಠಾಣೆಯಲ್ಲಿ ಸುಮಾರು ಒಂದೂವರೆ ಗಂಟೆ ಸಮಯದಲ್ಲಿ ಪ್ರಿಂಟ್ ತೆಗೆದೆನು. ನಿಪಿ.3 ರಲ್ಲಿ ತೆಗೆದ ಸಮಯ, ದಿನಾಂಕ ನಮೂದಿಲ್ಲ ಎಂದರೆ ಸರಿ. ಸೋನಿ ಕ್ಯಾಮೇರಾದಿಂದ ನಿಪಿ.3 ನ್ನು ತೆಗೆದಿರುತ್ತೇನೆ. ಫೋಟೋ ಪ್ರಿಂಟ್ ತೆಗೆದ ಸಮಯ ನಿಪಿ.3 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ.*

*4. ಫೋಟೋ ತೆಗೆದಿರುವ ಸ್ಥಳದಿಂದ ಅಂತನಹಳ್ಳಿ 3 ಕಿ ಮಿ ಆಗುತ್ತದೆ. ಮಹಜರು ಆಗುವವರೆಗೂ ಚಾಸಾ.8 ರವರ ಜೊತೆಗಿದ್ದೆನು. ನಾನು ಮಹಜರಿಗೆ ಸಹಿ ಮಾಡಿಲ್ಲ. ನಾನು ಬೈಕಿನಲ್ಲಿ ಹೋಗಿದ್ದೆನು. ಠಾಣೆಯಿಂದ ಘಟನಾ ಸ್ಥಳಕ್ಕೆ 15 ನಿಮಿಷದಲ್ಲಿ ಹೋಗಿರುತ್ತೇನೆ. ಠಾಣೆಗೆ ಹೋದ ಕೂಡಲೇ ಫೋಟೋವನ್ನು ಪ್ರಿಂಟ್ ತೆಗೆದೆನು. ನಿಪಿ. 17 ರಲ್ಲಿ ಫೋಟೋ ತೆಗೆದ ಸಮಯ ಬರೆದಿಲ್ಲ ಎಂದರೆ ಸರಿ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.***